MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

YUVA MARGA KANNADA DAILY NEWS PAPER

ಸಂಪುಟ: 04 | ಸಂಚಿಕೆ: 250 | ಶುಕ್ರವಾರ : 18-07-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 250 | FRIDAY : 18-07-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಬಿಜೆಪಿಯಿಂದ ಗ್ಯಾರಂಟಿ ನಕಲು : ಎಂ.ಬಿ.ಪಾಟೀಲ್

**ಬೆಂಗಳೂರು,ಜು.17**–ನಾವು ಕೊಟ್ಟ ಐದು ಗ್ಯಾರಂಟಿಗಳನ್ನು ಬಿಜೆಪಿ ಟೀಕಿಸುತ್ತಿತ್ತು. ಆದರೆ ತಾನು ಎಲ್ಲಾ ರಾಜ್ಯಗಳಲ್ಲೂ ಇದೇ ಮಾದರಿಯನ್ನು ನಕಲು ಮಾಡುತ್ತಿದೆ. ಈಗ ಚುನಾವಣೆಯ ಹತ್ತಿರವಿರುವ ಬಿಹಾರದಲ್ಲಿ ಬಿಜೆಪಿ–ಜೆಡಿಯು ಸಮ್ಮಿಶ್ರ ಸರಕಾರವು ತಿಂಗಳಿಗೆ 125 ಯೂನಿಟ್ ಉಚಿತ ವಿದ್ಯುತ್ ಘೋಷಿಸಿದೆ. ಇದು ಬಿಜೆಪಿಯ ದ್ವಂದ್ವವನ್ನು ತೋರಿಸುತ್ತದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆ.ಗುರುವಾರ ವಿಧಾನಸೌಧದಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆ ಅವರು ಮಾತನಾಡಿದರು.ನಾವು ರಾಜ್ಯದಲ್ಲಿ ಮಹಿಳೆಯರ ನೆರವಿಗೆ ಗೃಹ 'ಲಕ್ಷ್ಮಿ ಯೋಜನೆಯನ್ನು ತಂದೆವು. ಬಿಜೆಪಿ ಇದನ್ನು ಟೀಕಿಸಿತು. ಆದರೆ ಮಹಾರಾಷ್ಟ್ರದಲ್ಲಿ ಅದೇ ಬಿಜೆಪಿ ಸರಕಾರವು ಇದನ್ನು ಲಾಡ್ಲಿ ಬೆಹೆನ್ **(2ನೇಪುಟಕ್ಕೆ)**

## ದೊಡ್ಡಿಗಳಿಗೆ ಸಮರ್ಪಕ ವಿದ್ಯುತ್ ಸರಬರಾಜಿಗೆ ಆಗ್ರಹಿಸಿ ಮುತ್ತಿಗೆ

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಜು.17**– ತಾಲೂಕಿನ ಗುರುಗುಂಟಾ ಭಾಗದ ದೊಡ್ಡಿಗಳಲ್ಲಿ ಎಸ್‌ಟಿ ಮತ್ತು ಎಸ್‌ಸಿ ಜನಾಂಗದವರು ವಾಸಿಸುತ್ತಿರುವ ದೊಡ್ಡಿಗಳಿಗೆ ರಾತ್ರಿ ಸಮಯದಲ್ಲಿ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಗುರುಗುಂಟಾದಲ್ಲಿರುವ ಜೆಸ್ಕಾಂನ ವಿದ್ಯುತ್ ವಿತರಣೆ ಶಾಖೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ಮಾಡಿದರು.



ಕಳೆದ 4–5 ವರ್ಷದಿಂದ ದೊಡ್ಡಿಗಳಿಗೆ ರಾತ್ರಿ ಸಮಯದಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ. ಇದರಿಂದ ಶಾಲಾ ಮಕ್ಕಳಿಗೆ ಓದಿಕೊಳ್ಳಲು ಅನಾನುಕೂಲವಾಗುತ್ತಿದ್ದು, ಹಾಗೂ ವಿಷ ಜಂತುಗಳ ಹಾವಳಿ ಹೆಚ್ಚಾಗಿದೆ. ಅಲ್ಲದೇ ವಿದ್ಯುತ್ ಸರಬರಾಜು ಇಲ್ಲದ ಪರಿಣಾಮ ಕುಡಿಯುವ ನೀರಿಗೂ ಸಂಕಷ್ಟ ಅನುಭವಿಸುತ್ತಿದ್ದಾರೆ.

ಈ ಪ್ರದೇಶದಲ್ಲಿರುವ ಕೆಲವೊಂದು ಮನೆಗಳಿಗೆ ಈಗಾಗಲೇ ವಿದ್ಯುತ್ ಆರ್.ಆರ್. ನಂಬರ್‌ಗಳನ್ನು ಕೊಟ್ಟು ಮೀಟರ್‌ಗಳನ್ನು ಅಳವಡಿಸಿದ್ದಾರೆ. ಆದರೂ ಸಹ ಅವರಿಗೆ 24 ತಾಸು ವಿದ್ಯುತ್ ಸರಬರಾಜಿನಿಂದ ವಂಚಿತರಾಗಿರುತ್ತಾರೆ. ಈ **(2ನೇಪುಟಕ್ಕೆ)**

## ನೈಜ ಸುದ್ದಿ ಮಾಡಬೇಕಾದವರು ಫ್ಯಾಕ್ಟ್ ಚೆಕ್ ಮಾಡುವ ಪರಿಸ್ಥಿತಿ ಬಂದಿದೆ:ದೇವಯ್ಯ ಗುತ್ತೇದಾರ




**ಕಲಬುರಗಿ:ಜು.17**– ಮಾಧ್ಯಮ ಕ್ಷೇತ್ರದಲ್ಲಿ ವೃತ್ತಿಪರ ಪತ್ರಕರ್ತರಿಗೆ ಇಂದಿನ ದಿನಮಾನದಲ್ಲಿ ವಿಪುಲ ಅವಕಾಶವಿದ್ದು, ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಮುಂದೇನೆಂಬ ಚಿಂತೆಯ ಭಯ ಬೇಡ ಎಂದು ವಿಜಯ ಕರ್ನಾಟಕ ದಿನಪತ್ರಿಕೆಯ ಕಲಬುರಗಿ ಅವೃತ್ತಿಯ ಸ್ಥಾನಿಕ ಸಂಪಾದಕ ದೇವಯ್ಯ ಗುತ್ತೇದಾರ್ ಹೇಳಿದರು.

ಕಲಬುರಗಿಯ ಶರಣಬಸವ ವಿಶ್ವವಿದ್ಯಾಲಯ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಇವುಗಳ ಸಂಯುಕ್ತಾಶ್ರಯದಲ್ಲಿ ಗುರುವಾರ ಶರಣಬಸವ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಅನುಭವ ಮಂಟಪದಲ್ಲಿ ಆಯೋಜಿಸಿದ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದೆಲ್ಲ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಮುಂದಿನ ಭವಿಷ್ಯ ಕಟ್ಟಿಕೊಳ್ಳಲು ಪತ್ರಿಕೆ, ಸುದ್ದಿ ವಾಹಿನಿಗಳನ್ನೆ ಅವಲಂಬಿಸಬೇಕಿತ್ತು. ಇದೀಗ ಸಾಮಾಜಿಕ ಮಾಧ್ಯಮ ವೇಗವಾಗಿ ಬೆಳೆಯುತ್ತಿರುವುದರಿಂದ ಇಲ್ಲಿಯೂ ಉದ್ಯೋಗದ ಅವಕಾಶ ಹೆಚ್ಚಿದೆ. ಅದರಲ್ಲಿಯೂ ವೃತ್ತಿಪರತೆ ಮೈಗೂಡಿಸಿಕೊಂಡವರಿಗೆ, ಭಾಷೆಯ ಮೇಲೆ ಪ್ರಭುದ್ಧತೆ ಇರುವವರಿಗೆ ಅವಕಾಶ ಹೆಚ್ಚು. ಕಾರ್ಪೊರೇಟ್ ಕಂಪನಿಯಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿಯೂ ಕೆಲಸ ಮಾಡಬಹುದಾಗಿದೆ. ಇದಲ್ಲದೆ ಫೋಟೋ ಎಡಿಟಿಂಗ್, ಡಿಸೈನ್, ಜಾಹೀರಾತು ಅನೇಕ ವಿಭಾಗದಲ್ಲಿ ಉದ್ಯೋಗ ಇವೆ ಎಂದರು.

ಸುದ್ದಿ ವಾಹಿನಿ ಬಂದ ಮೇಲೆ ಮುದ್ರಣ ಮಾಧ್ಯಮದ ಕಥೆ ಮುಗಿಯಿತು ಎನ್ನುತ್ತಿದ್ದರು. ಅದರೆ ಇಂದಿಗೂ ವಿದ್ಯುನ್ಮಾನ ವಾಹಿನಿಕ್ಕಿಂತ ಮುದ್ರಣ ಮಾಧ್ಯಮ ತನ್ನ ಸಾಮಾಜಿಕ ಜವಾಬ್ದಾರಿ ಬಹಳ ಎಚ್ಚರಿಕೆಯಿಂದ ನಿಭಾಯಿಸುತ್ತಿದೆ ಎಂದು ಹಲವಾರು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಅಭಿಪ್ರಾಯ ಪಟ್ಟಿದೆ. ಹೀಗಾಗಿ ಪತ್ರಿಕಾ ವೃತ್ತಿಗೆ ಬರುವ ಪ್ರತಿಯೊಬ್ಬ ವಿದ್ಯಾರ್ಥಿ ಪ್ರತಿ ದಿನ ದಿನಪತ್ರಿಕೆಗಳನ್ನು ಓದುವ ಮೂಲಕ ಮತ್ತು ಜ್ಞಾನ ಹೆಚ್ಚಿಸಿಕೊ ಳ್ಳಬೇಕೆಂದ ಅವರು, ತನಿಖಾ ವರದಿ ಮಾಡಬೇಕಾದರೆ ದಾಖಲೆ ಇಟ್ಟುಕೊಳ್ಳುವುದು ಒಳಿತು ಎಂದರು.

ಇಂದು ನಿಜ ಸುದ್ದಿಗಾಗಿ ಪರಿಶ್ರಮ ಪಡಬೇಕಿದೆ. ಫ್ಯಾಕ್ಡ್ ನ್ಯೂಸ್ ನೀಡಬೆಕಾದ ನಾವು ಸುದ್ದಿ ಮಾಡಲು ಫ್ಯಾಕ್ಟ್ ಚೆಕ್ ಮಾಡುವ ಪರಿಸ್ಥಿತಿಯಲ್ಲಿದ್ದೇವೆ. ಪತ್ರಕರ್ತನಾದವನು ಜೀವಪರ, ಜನಪರವಾಗಿದ್ದು, ಪತ್ರಿಕಾ ಧರ್ಮದ ಮೌಲ್ಯ ಎತ್ತಿ ಹಿಡಿಯಬೇಕು. 181 ದೇಶಗಳ ಪೈಕಿ ಪತ್ರಿಕಾ ಸ್ವಾತಂತ್ರ್ಯದಲ್ಲಿ ಭಾರತ ಇಂದು 151ನೇ ಸ್ಥಾನದಲ್ಲಿದೆ. ಅದೇ ರೀತಿ ವಾಕ್**(2ನೇಪುಟಕ್ಕೆ)**

## ವಿಮಾ ಪ್ರಚಾರ ವಾಹನಕ್ಕೆ ಜಂಟಿ ಕೃಷಿ ನಿರ್ದೇಶಕರಿಂದ ಚಾಲನೆ

**ಯುವ ಮಾರ್ಗ ಸುದ್ದಿ**

**ರಾಯಚೂರು,ಜು.17**–ಇಲ್ಲಿನ ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯದ ಆವರಣದಲ್ಲಿ 2025–26ನೇ ಸಾಲಿನ ಮುಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ಪಿಎಮ್ಎಫ್‌ಬಿವೈ) ವಿಮಾ ಯೋಜನೆಯ ಬಗ್ಗೆ ರೈತರಿಗೆ ಅರಿವು ಮೂಡಿಸುವ ಪ್ರಚಾರ ವಾಹನಕ್ಕೆ ಜಂಟಿ ಕೃಷಿ ನಿರ್ದೇಶಕರಾದ ಪ್ರಕಾಶ್ ಚವ್ಹಾಣ್ ಅವರು ಇತ್ತೀಚೆಗೆ ಚಾಲನೆ ನೀಡಿದರು.



ಈ ವೇಳೆ ಅವರು ಮಾತನಾಡಿ, ಭತ್ತ (ಮಳೆಯಾಶ್ರೀತ), ಹತ್ತಿ (ನೀರಾವರಿ), ಹತ್ತಿ (ಮಳೆಯಾಶ್ರೀತ), ತೊಗರಿ (ನೀರಾವರಿ), ತೊಗರಿ (ಮಳೆಯಾಶ್ರೀತ), ಸೂರ್ಯಕಾಂತಿ (ಮಳೆಯಾಶ್ರೀತ), ನೆಲಗಡಲೆ (ನೀರಾವರಿ), ನೆಲಗಡಲೆ (ಮಳೆಯಾಶ್ರೀತ), ಸಜ್ಜೆ (ನೀರಾವರಿ), ಸಜ್ಜೆ (ಮಳೆಯಾಶ್ರೀತ), ಎಳ್ಳು (ಮಳೆಯಾಶ್ರೀತ), ಹೆಸರು (ಮಳೆಯಾಶ್ರೀತ)ಗಳಿಗೆ ವಿಮೆ ಮಾಡಿಸಲು ಜುಲೈ 31 ಕೊನೆಯ ದಿನವಾಗಿದೆ. ಭತ್ತ (ನೀರಾವರಿ), ಮುಸುಕಿನ ಜೋಳ (ನೀರಾವರಿ), ಈರುಳ್ಳಿ (ನೀರಾವರಿ), ಸೂರ್ಯಕಾಂತಿ (ನೀರಾವರಿ) ಬೆಳೆಗೆ ಆಗಸ್ಟ್ 16 ವಿಮೆ ಮಾಡಿಸಲು ಕೊನೆಯ ದಿನವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಕೃಷಿ ಇಲಾಖೆಯ ಉಪ ಕೃಷಿ ನಿರ್ದೇಶಕರಾದ ಜಯಪ್ರಕಾಶ್ ಸೇರಿದಂತೆ ರಾಯಚೂರು ತಾಲೂಕು ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರಾದ ದೀಪಾ ಕುಲಕರ್ಣಿ, ವಿಮಾ ಕಂಪನಿಯ ಪ್ರತಿನಿಧಿಗಳು ಹಾಗೂ ರೈತರು ಕಾರ್ಯಕ್ರಮದಲ್ಲಿ ಇದ್ದರು.

## ಕಾಲ್ತುಳಿತ ಪ್ರಕರಣ ಆರ್‌ಸಿಬಿ ಹೊಣೆ



**ಬೆಂಗಳೂರು,ಜು.17**–ಆರ್‌ಸಿಬಿ ಐಪಿಎಲ್ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತ ದುರಂತದ ಸಂಬಂಧ ಸರ್ಕಾರ ಸಲ್ಲಿಸಿರುವ ಪ್ರಾಥಮಿಕ ತನಿಖಾ ವರದಿ ಬಹಿರಂಗಗೊಂಡಿದ್ದು, ಘಟನೆಗೆ ಆರ್‌ಸಿಬಿ ಅಸಮರ್ಪಕ ಯೋಜನೆಯೇ ಮುಖ್ಯ ಕಾರಣ ಎಂದು ಹೈಕೋರ್ಟಿಗೆ ತಿಳಿಸಲಾಗಿದೆ.

ಘಟನೆ ಸಂಬಂಧ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿರುವ ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ್ ಅವರಿದ್ದ ವಿಭಾಗೀಯ ಪೀಠಕ್ಕೆ ಸರ್ಕಾರ ವರದಿ ಸಲ್ಲಿಸಿದೆ ವೈದ್ಯಕೀಯ ಸೌಲಭ್ಯ ಒದಗಿಸುವುದು ಕಾರ್ಯಕ್ರಮದ ಸಂಘಟಕರ ಪ್ರಾಥಮಿಕ ಕರ್ತವ್ಯ ಮತ್ತು ಜವಾಬ್ದಾರಿಯಾಗಿತ್ತು. ಆದರೆ, ಆಯೋಜಕರು ಅಗತ್ಯವಿರುವ ಮುನ್ನೆಚ್ಚರಿಕೆಗಳನ್ನು ಕೈಗೊಂಡಿರಲಿಲ್ಲ.

ವೈದ್ಯಕೀಯ ತುರ್ತು ಪರಿಸ್ಥಿತಿ ನಿಭಾಯಿಸಲು ಪ್ರಥಮ ಚಿಕಿತ್ಸಾ ವ್ಯವಸ್ಥೆಗಳನ್ನು ಮಾಡುವಲ್ಲಿ ವಿಫಲರಾಗಿದ್ದರು. ಜೊತೆಗೆ, ಕಾರ್ಯಕ್ರಮ ಆಯೋಜನೆಗೆ ಅನುಮತಿ ಕೋರಿ ಮುಂಚಿತವಾಗಿ ಮನವಿ ಸಲ್ಲಿಸಿದ್ದರೆ ವೈದ್ಯಕೀಯ ತುರ್ತು ವ್ಯವಸ್ಥೆಗಳ ಲಭ್ಯತೆ ಹಾಗೂ ಅಗತ್ಯತೆಗಳ ಬಗ್ಗೆ ಅಧಿಕಾರಿಗಳು ತಿಳಿದುಕೊಳ್ಳಬಹುದಾಗಿತ್ತು.

ಆದರೆ, ಆಯೋಜಕರ ಕಾರ್ಯಕ್ರಮ ಸರಿಯಾಗಿ ಅಥವಾ ಮುಂಚಿತವಾಗಿ ನಡೆಸಲು ಪರವಾನಿಗೆಗಾಗಿ ಮನವಿ ಸಲ್ಲಿಸದ ಪರಿಣಾಮ ಈ ಎಲ್ಲ ಅಂಶಗಳನ್ನು ಪರಿಶೀಲಿಸುವುದಕ್ಕೆ ಸಾಧ್ಯವಾಗಿರಲಿಲ್ಲ ಎಂದು ವರದಿಯಲ್ಲಿ ವಿವರಿಸಲಾಗಿದೆ.

ವೈದ್ಯಕೀಯ ತಂಡ ನಿಯೋಜನೆ:ಆದರೂ, ರಾಜ್ಯ ಸರ್ಕಾರ ಮುಂಜಾಗ್ರತಾ ಕ್ರಮವಾಗಿ ವೈದ್ಯರು ಮತ್ತು ಸಹಾಯಕ ಸಿಬ್ಬಂದಿಯಿದ್ದ ಎರಡು ವೈದ್ಯಕೀಯ ತಂಡಗಳಿದ್ದ ಆಂಬ್ಯುಲೆನ್ಸ್ ಹಾಗೂ ಅಗ್ನಿಶಾಮಕ ರಕ್ಷಣಾ ವಾಹನ ನಿಯೋಜಿಸಿತ್ತು. ದೊಡ್ಡಮಟ್ಟದ ಸಂಭ್ರಮಾಚರಣೆ ವೇಳೆ ವೈದ್ಯಕೀಯ ತುರ್ತು ಸೌಲಭ್ಯಗಳ ಕಲ್ಪಿಸಬೇಕು ಎಂಬ ಗೊತ್ತಿದ್ದರೂ, ಆಯೋಜಕರು ಸಂಪೂರ್ಣ ನಿರ್ಲಕ್ಷ್ಯ ವಹಿಸಿದ್ದರು ಎಂದು ವರದಿಯಲ್ಲಿ ತಿಳಿಸಲಾಗಿದೆ.

ಸಂಭ್ರಮಾಚರಣೆ ಕಾರ್ಯಕ್ರಮಕ್ಕೆ ಎಷ್ಟು ಜನ ಆಗಮಿಸುತ್ತಾರೆ ಎಂಬುದರ ಕುರಿತು ಅಂದಾಜು ಮಾಡುವುದಕ್ಕಾಗಿ ಪೊಲೀಸರಿಗೆ ಕಾಲಾವಕಾಶ ಸಾಕಾಗಿರಲಿಲ್ಲ. ಅಲ್ಲದೇ, ಅನೀರಿಕ್ಷಿತ ಮಟ್ಟದಲ್ಲಿ ಜನ ಸೇರ್ಪಡೆಗೊಂಡಿದ್ದರು ಎಂದು **(2ನೇಪುಟಕ್ಕೆ)**

## ಆಕ್ರಮ ನೀರಾವರಿಗೆ ಕುಮ್ಮಕ್ಕು–ಅಧಿಕಾರಿಗಳ ಮೇಲೆ ಕ್ರಮಕ್ಕೆ ಆಗ್ರಹಿಸಿ ಡಿಎಸ್‌ಎಸ್ ಅನಿರ್ದಿಷ್ಟ ಧರಣಿ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಜು.17**–ತಾಲೂಕಿನ ನಕ್ಕುಂದಿ ಗ್ರಾಮದ ತುಂಗಭದ್ರಾ ಎಡದಂಡೆ ನಾಲೆಯ ಉಪಕಾಲುವೆ 76/3/1 ರಲ್ಲಿ ಆಕ್ರಮವಾಗಿ ಕಾಂಕ್ರೀಟ್ ಬೆಡ್ ಹಾಕಿಸಿ ಸುಮಾರು 50 ಎಕರೆ ಜಮೀನಿಗೆ ನೀರು ಹರಿಸುವಲ್ಲಿ ಜಮೀನು ಮಾಲಿಕರೊಂದಿಗೆ ಶಾಮೀಲಾಗಿರುವ 76 ರ ನೀರಾವರಿ ನಿಗಮದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊ ಳ್ಳುವಂತೆ ಒತ್ತಾಯಿಸಿ ಹಿರೆ ಕೊಟ್ನೇಕಲ್ ಉಪ ವಿಭಾಗದ ನೀರಾವರಿ ನಿಗಮದ ಕಚೇರಿಯಮುಂದೆ ತಾಲೂಕ ದಲಿತ ಸಂಘರ್ಷ ಸಮಿತಿ ರಿ.(ಸಾಮಾಜಿಕ ನ್ಯಾಯಕ್ಕಾಗಿ ಚಳುವಳಿ) ಬುಧವಾರದಂದು ಅನಿರ್ದಿಷ್ಟ ಧರಣಿ ಹಮ್ಮಿಕೊಂಡಿದೆ.




ಈ ಸಂಧರ್ಭದಲ್ಲಿ ಮಾತನಾಡಿದ ಸಂಚಾಲಕ ಬಸವರಾಜ ನಕ್ಕುಂದಿ,ಎಡದಂಡೆ ನಾಲೆಯ 76/3/1 ರ ಉಪಕಾಲುವೆಯ ಮೇಲ್ಭಾಗದ ರೈತರಿಗೆ ನೀರು ಹರಿಸಲು ಅನಧಿಕೃತವಾಗಿ ಕಟ್ ಓಪನ ಮಾಡಿ ಕಾಲುವೆಗೆ ಕಾಂಕ್ರೀಟ್ ಬೆಡ್ ಹಾಕುವ ಮೂಲಕ ಕೊಟ್ನೇಕಲ್ ನೀರವಾರಿ ನಿಗಮದ ಅಧಿಕಾರಿಗಳು ಕೆಳ ಭಾಗದ ರೈತರಿಗೆ ವಂಚನೆ ಮಾಡುತ್ತಿದ್ದಾರೆ.ಈಗಾಗಲೆ ಕೆಳಭಾಗದ ಜಮೀನಿನಲ್ಲಿ ಬೆಳೆದಿರುವ ಬೆಳೆಗಳು ನೀರಿಲ್ಲದೆ ಒಣಗಿ ರೈತರಿಗೆ ಅಪಾರ ನಷ್ಟವಾಗುತ್ತಿದೆ.

ಈ ಕುರಿತು ಕಳೆದ ಜನವರಿಯಿಂದ ಸಂಬಂಧ ಪಟ್ಟ ಇಲ್ಲಾಖೆಯ ವರಿಷ್ಟರಿಗೆ,ತಹಸೀಲ್ದಾರರಿಗೆ ಮನವಿ ಸಲ್ಲಿಸಿ ಜಮೀನು ಮಾಲಿಕರ ಮಲೆ ಕಾನೂನು ಕ್ರಮ ಹಾಗೂ ಕೊಟ್ನೇಕಲ್ ವಿಭಾಗದ ಎಇಇ ಈಶ್ವರ,ಜೆಇ ಗಲಕಾದ ರಮೇಶ ಹಾಗೂ ಲಕ್ಷ್ಮಿಯವರನ್ನು ಅಮಾನತ್ತು ಗೊಳಿಸುವಂತೆ ಒತ್ತಾಯಿಸಲಾಗಿತ್ತು.

ಆದರೆ ವರಿಷ್ಠ ಅಧಿಕಾರಿಗಳ ನಿರ್ಲಕ್ಷಕ್ಕೆ ಬೇಸತ್ತು ಬೇಡಿಕೆಗಳಈಡೇರಿಸುವವರೆಗೆ ಅನಿರ್ಧಿಷ್ಟ ಧರಣಿ ನಡೆಸುವುದಾಗಿ ತಿಳಿಸಿದರು.ಧರಣಿಯಲ್ಲಿ ವೀರೇಶ, ಮಹಂತೇಶ ಪೂಜಾರಿ,ತಿಮ್ಮಣ್ಣನಾಯಕ,ವಿರುಪಣ್ಣ ಚಲುವಾದಿ,ಶಿವಪ್ಪ ನಾಡಗೌಡ,ಹುಲುಗೆಪ್ಪ ನಕ್ಕುಂದಿ,ಶಿವಗ್ಯಾನಿ ಅಮರಾವತಿ,ಶಿವ ಮಹಾಂತೇಶ ಮುಂತಾದವರು ಭಾಗವಹಿಸಿದ್ದರು.

## ಜವಳಗೇರಾ ಕರ್ನಾಟಕ ಪ್ರಬ್ಲಿಕ್ ಶಾಲೆಯಲ್ಲಿ ವಿಶೇಷ ಕಾರ್ಯಕ್ರಮ




**ಯುವ ಮಾರ್ಗ ಸುದ್ದಿ**

**ರಾಯಚೂರು,ಜು.17**–ಜಿಲ್ಲೆಯ ಸಿಂಧನೂರು ತಾಲೂಕಿನ ಜವಳಗೇರಾ ಗ್ರಾಮದ ಕರ್ನಾಟಕ ಪಬ್ಲಿಕ್ ಪ್ರೌಢ ಶಾಲೆಯಲ್ಲಿ ಜಿಲ್ಲಾಡಳಿ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಹಿಳಾ ಸಬಲೀಕರಣ ಘಟಕ ರಾಯಚೂರು ವತಿಯಿಂದ ಮಹಿಳೆಯರ ಶಿಕ್ಷಣದ ಮಹತ್ವ ಕುರಿತು ಕಾರ್ಯಕ್ರಮ ಇತ್ತೀಚೆಗೆ ಯಶಸ್ವಿಯಾಗಿ ನಡೆಯಿತು.

ಈ ವೇಳೆ ಮೀಷನ್ ಯೋಜನೆಯ ಜಿಲ್ಲಾ ಸಂಯೋಜಕರಾದ ಬಾವಸಲಿ ಅವರು ಮಾತನಾಡಿ, ಬೇಟಿ ಬಚಾವೋ ಬೇಟಿ ಪಡಾವೊ ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಹೆಣ್ಣು ಮಗುವನ್ನು ಉಳಿಸಿ, ಹೆಣ್ಣು ಮಗುವನ್ನು ಓದಿಸಿ, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತೇಜಿಸುವುದಾಗಿದೆ. ಹೆಣ್ಣು ಈ ಸಮಾಜದ ಮುಖ್ಯವಾಹಿನಿಗೆ ಬರುವಂತೆ ಮಾಡುವುದು ಜೊತೆಗೆ ಯಾರೂ ಕೂಡ ಹೆಣ್ಣು ಗಂಡು ಎಂದು ಲಿಂಗ ತಾರತಮ್ಯ ಮಾಡದೆ ಹೆಣ್ಣನ್ನು ಗೌರವಿಸುವ ಮನೋಭಾವ ಬೆಳೆಸಿಕೊಳ್ಳಬೇಕು**(2ನೇಪುಟಕ್ಕೆ)**

## ಮೊದಲನೇಯ ಪುಟದಿಂದ

# ನೈಜ ಸುದ್ದಿ ಮಾಡಬೇಕಾದವರು ಫ್ಯಾಕ್ಟ್ ಚೆಕ್ ಮಾಡುವ ಪರಿಸ್ಥಿತಿ ಬಂದಿದೆ:ದೇವಯ್ಯ ಗುತ್ತೇದಾರ

ಸ್ವಾತಂತ್ರ್ಯದಲ್ಲಿ 109ನೇ ಸ್ಥಾನ. ವಿಶ್ವದ ಬಲಿಷ್ಟ ಪ್ರಜಾಪ್ರಭುತ್ವದಲ್ಲಿ ಪತ್ರಿಕಾ ಮತ್ತು ವಾಕ್ ಸ್ವಾತಂತ್ರ್ಯ ಉಳಿಸುಚ ಜವಾಬ್ದಾರಿ ಪತ್ರಕರ್ತರ ಮೇಲಿದೆ. ಪತ್ರಿಕಾ ದಿನಾಚರಣೆಯ ಈ ಸಂದರ್ಭದಲ್ಲಿ ನಾವೆಲ್ಲರು ಇದನ್ನು ಅವಲೋಕನ ಮಾಡಿಕೊಳ್ಳಲು ಇದು ಸೂಕ್ತ ಕಾಲ ಎಂದು ಅಭಿಪ್ರಾಯಪಟ್ಟರು

ಕೌಶಲ್ಯಕ್ಕೆ ಮಹತ್ವ ಕೊಡಿ:ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಲಬುರಗಿ ಉಪನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟಿ ಮಾತನಾಡಿ, ಕೌಶಲ್ಯ ಇದ್ದಲ್ಲಿ ಮಾತ್ರ ಮನುಷ್ಯನಿಗೆ ಬೆಲೆ ಇದೆ. ಹೀಗಾಗಿ ನಿಮ್ಮ ಆಸಕ್ತಿಯ ವಿಷಯದಲ್ಲಿ ಕೌಶಲ್ಯತೆ ಹೆಚ್ಚಿಸಿಕೊಳ್ಳಬೇಕು. ಕಥೆ, ಕಾದಂಬರಿ, ಸಾಹಿತ್ಯ ಓದು ವೃತ್ತಪರತೆ ಹೆಚ್ಚಿಸಲು ಅನುಕೂಲವಾಗಲಿದೆ. ಇನ್ನು ಮೊಬೈಲ್ ಬಳಕೆ ಸಿಮಿತವಾಗಿ ಬಳಸಿ ಅನಗತ್ಯ ಅದರಲ್ಲಿಯೇ ಕಳೆದು ಹೋಗಬೇಡಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶರಣಬಸವ ವಿಶ್ವವಿದ್ಯಾಲಯದ ಕುಲಪತಿ ಡಾ. ಅನಿಲಕುಮಾರ ಜಿ. ಬಿಡವೆ ಮಾತನಾಡಿ, ಇಂದು ಯಾವುದೇ ಒಂದು ಗಣ್ಯರ ಭಾಷಣವನ್ನು ಎ.ಐ. ತಂತ್ರಜ್ಞಾನ ಸಹಾಯದಿಂದ ಕ್ಷಣಾರ್ಧದಲ್ಲಿ ತಮಗೆ ಬೇಕಾದ ಭಾಷೆಯಲ್ಲಿ ಭಾಷಾಂತರ ಮಾಡಬಹುದಾಗಿದೆ. ಇಷ್ಟರ ಮಟ್ಟಿಗೆ ತಂತ್ರಜ್ಞಾನ ಬೆಳೆದಿದ್ದು, ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಶರಣಬಸವ ವಿ.ವಿ. ಶೈಕ್ಷಣಿಕ ಪಠ್ಯಕ್ರಮದ ಜೊತೆ ಮಾನವೀಯ ಮೌಲ್ಯ ಬಿತ್ತುವ ಕೆಲಸ ಮಾಡುತ್ತಿದೆ ಎಂದರು.ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಸಂಗಮನಾಥ ರೇವತಗಾಂವ ಮಾತನಾಡಿ, ಶರಣಬಸವ ವಿ.ವಿ. ಪತ್ರಿಕೋದ್ಯಮ ವಿಷಯದಲ್ಲಿ ಚಲನಶೀಲವಾಗಿ ಕಾರ್ಯನಿರ್ವಹಿಸುತ್ತಿದೆ. ಪತ್ರಿಕೋದ್ಯಮ ವಿದ್ಯಾರ್ಥಿಗಳು ಪತ್ರಿಕೆ ಓದುವ ಸಂಸ್ಕೃತಿ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.ಇದೇ ಸಂದರ್ಭದಲ್ಲಿ ಸೇಡಂ ಪತ್ರಕರ್ತರ ಸಂಘದಿಂದ ಪತ್ರಿಕಾ ಕ್ಷೇತ್ರದಲ್ಲಿನ ಗಣನೀಯ ಸೇವೆಗೆ ಕೊಡಮಾಡುವ ಬಿ.ಮಹಾದೇವಪ್ಪ ಪ್ರಶಸ್ತಿಗೆ ಭಾಜನರಾಗಿರುವ ವಿಶ್ವವಿದ್ಯಾಲಯದ ಸಮಾಜ ನಿಕಾಯದ ಡೀನ್ ಟಿ.ವಿ.ಶಿವಾನಂದನ್ ಅವರನ್ನು ಕುಲಪತಿ ಡಾ.ಅನೀಲಕುಮಾರ್ ಜಿ. ಬಿಡವೇ ಸೇರಿದಂತೆ ಗಣ್ಯರು, ವಿಭಾಗದ ಪ್ರಾಧ್ಯಾಪಕ ವೃಂದ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಬಾಬುರಾವ್ ಯಡ್ರಾಮಿ ಸೇರಿದಂತೆ ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಇದ್ದರು. ವಿಶ್ವವಿದ್ಯಾಲಯದ ಸಮಾಜ ನಿಕಾಯದ ಡೀನ್ ಟಿ.ವಿ.ಶಿವಾನಂದನ್ ಸರ್ವರನ್ನು ಸ್ವಾಗತಿಸಿದರು. ಪತ್ರಿಕೋದ್ಯಮ ವಿಭಾಗದ ಚೇರ ಪರ್ಸನ್ ಡಾ.ಸುನಿತಾ ಪಾಟೀಲ ನಿರೂಪಿಸಿದರು. ಚಂದ್ರಶೇಖರ ಕಕ್ಕೇರಿ ವಂದಿಸಿದರು. ವಿದ್ಯಾರ್ಥಿನಿ ಸೌಮ್ಯ ಪ್ರಾರ್ಥನೆಗೈದರು.

# ಕಾಲ್ತುಳಿತ ಪ್ರಕರಣ ಆರ್‌ಸಿಬಿ ಹೊಣೆ

ವರದಿಯಲ್ಲಿ ಹೇಳ ಲಾಗಿದೆ. ಪೊಲೀಸ್ ಸಿಬ್ಬಂದಿ ನಿಯೋಜನೆ:ಸಂಭ್ರಮಾಚರಣೆಗೂ ಮುನ್ನ ನಗರದಲ್ಲಿ ಸಂಚಾರ ದಟ್ಟಣೆ ನಿಯಂತ್ರಣಕ್ಕಾಗಿ 654 ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಘಟನೆಯ ಬಳಿಕ ಜನರನ್ನು ನಿಯಂತ್ರಿಸುವುದಕ್ಕಾಗಿ 440 ಸಿಬ್ಬಂದಿಯುಳ್ಳ ಹೆಚ್ಚುವರಿ 20 ಕೆಎಸ್‌ಆರ್‌ಪಿ ತುಕಡಿಗಳನ್ನು ನಿಯೋಜನೆ ಮಾಡಲಾಗಿತ್ತು. ಆರು ಜನ ಸಿಡಿಪಿಗಳು ಸೇರಿಸಿದಂತೆ ಸುಮಾರು 600ಕ್ಕೂ ಹೆಚ್ಚು ಜನ ಪೊಲೀಸರನ್ನು ವಿಧಾನಸೌಧ ಮತ್ತು ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಹೋಗುವ ಮಾರ್ಗದಲ್ಲಿ ನಿಯೋಜಿಸಲಾಗಿತ್ತು. ಬೆಂಗಳೂರು ನಗರದ ಎಲ್ಲ ಪೊಲೀಸ್ ಠಾಣೆಗಳ ಇನ್‌ಸ್ಪೆಕ್ಟರ್‌ಗಳು ತಕ್ಷಣ ತಮ್ಮ ಸಿಬ್ಬಂದಿಯೊಂದಿಗೆ ಕ್ರೀಡಾಂಗಣಕ್ಕೆ ಬಂದು ಜನ ದಟ್ಟಣೆ ನಿರ್ವಹಣೆಗೆ ಸೂಚನೆ ನೀಡಲಾಗಿತ್ತು ಎಂದು ವರದಿಯಲ್ಲಿ ತಿಳಿಸಲಾಗಿದೆ.

ವರದಿ ಬಹಿರಂಗಕ್ಕೆ ಸೂಚನೆ:ನ್ಯಾಯಾಂಗ ತನಿಖೆ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್ ನಡೆಸುತ್ತಿದ್ದ ತನಿಖೆ ಪೂರ್ಣಗೊಳ್ಳುವವರೆಗೂ ವರದಿಯನ್ನು ಗೌಪ್ಯವಾಗಿಡುವಂತೆ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮನವಿ ಮಾಡಿತ್ತು. ಆದರೆ, ನ್ಯಾಯಪೀಠ, ವರದಿಯನ್ನು ಪ್ರಕರಣದಲ್ಲಿ ಪಕ್ಷಗಾರರಾಗಿರುವವರಿಗೆ ಬಹಿರಂಗಗೊಳಿಸಬೇಕು ಎಂದು ಇತ್ತೀಚೆಗೆ ನಿರ್ದೇಶನ ನೀಡಿತ್ತು.

ಸಚಿವ ಸಂಪುಟದಲ್ಲಿ ಕುನ್ಹಾ ವರದಿ ಚರ್ಚೆ; ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಗೆ ರಚಿಸಲಾಗಿದ್ದ ನ್ಯಾಯಮೂರ್ತಿ ಮೈಕಲ್ ಜಾನ್ ಕುನ್ಹಾ ಅವರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯ ಬಗ್ಗೆ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ.

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್‌ಸಿಬಿ, ಕೆಎಸ್‌ಸಿಎ ಮತ್ತು ಡಿಎನ್‌ಎ ಸಂಸ್ಥೆಗಳು ಹೊಣೆಗಾರರು ಎಂದು ನ್ಯಾಯಮೂರ್ತಿ ಕುನ್ಹಾ ಅವರ ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಹೇಳಲಾಗಿದ್ದು, ಈ ಬಗ್ಗೆ ಇಂದು ಸಚಿವ ಸಂಪುಟ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆದಿದ್ದು, ವರದಿಯ ಶಿಫಾರಸ್ಸಿನಂತೆ ತಪ್ಪಿತಸ್ಥ ಸಂಸ್ಥೆಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ನಡೆಸುವ ಬಗ್ಗೆಯೂ ಚರ್ಚೆಗಳು ಸಂಪುಟ ಸಭೆಯಲ್ಲಿ ನಡೆದವು ಎಂದು ಹೇಳಲಾಗಿದೆ

# ಜವಳಗೇರಾ ಕರ್ನಾಟಕ ಪ್ರಬ್ಲಿಕ್ ಶಾಲೆಯಲ್ಲಿ ವಿಶೇಷ ಕಾರ್ಯಕ್ರಮ

ಎಂದರು.ಎಲ್ಲರೂ ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹಿಸಬೇಕು. ಸಾಮಾಜಿಕ ಪಿಡುಗುಗಳಾದ ,ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ದತಿ, ಹೆಣ್ಣು ಭ್ರೂಣಹತ್ಯೆ ಇಂತಹ ಅನಿಷ್ಠ ಪದ್ಧತಿಯನ್ನು ನಾವೆಲ್ಲರೂ ತೊಲಗಿಸಬೇಕು. ಇಂತಹ ಅನಿಷ್ಠ ಪದ್ಧತಿಗೆ ಪ್ರೋತ್ಸಾಹ ನೀಡುವವರ ವಿರುದ್ಧ ಕಾನೂನಿನಲ್ಲಿ ಕಠಿಣ ಶಿಕ್ಷೆ ಇದೆ ಎಂದರು.

# ದೊಡ್ಡಿಗಳಿಗೆ ಸಮರ್ಪಕ ವಿದ್ಯುತ್ ಸರಬರಾಜಿಗೆ ಆಗ್ರಹಿಸಿ ಮುತ್ತಿಗೆ

ಬಗ್ಗೆ ಹಲವಾರು ಬಾರಿ ಮನವಿ ಸಲ್ಲಿಸಿದರು ಅಧಿಕಾರಿಗಳು ಸರಿಯಾಗಿ ಸ್ಪಂಧಿಸುತ್ತಿಲ್ಲವಾದ್ದರಿಂದ ಮುತ್ತಿಗೆ ಹಾಕಿ ಪ್ರತಿಭಟನೆ ಮಾಡುತ್ತಿದ್ದೇವೆ. ವಾರದೊಳಗಾಗಿ ವಿದ್ಯುತ್ ಸರಬರಾಜು ಮಾಡದಿದ್ದರೇ ಅಹೋರಾತ್ರಿ ಧರಣಿ ಹಮ್ಮಿಕೊಳ್ಳಲಾಗುವುದೆಂದು ರೈತರು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಶಿವಪುತ್ರಗೌಡ ನಂದಿಹಾಳ, ತಾಲೂಕು ಅಧ್ಯಕ್ಷ ದುರ್ಗಾಪ್ರಸಾದ್, ಭಾಷಾಸಾಬ,ಬಸವರಾಜ, ಹನುಮಂತ, ಲಾಲಸಾಬ, ಮಹ್ಮದ್ ಖಾಜಾಸಾಬ, ಸದಾನಂದ, ನಾಗಪ್ಪ, ರಂಗಪ್ಪ, ಸೋಮರೆಡ್ಡಿ ಸೇರಿ ಇತರರು ಇದ್ದರು.

# ಬಿಜೆಪಿಯಿಂದ ಗ್ಯಾರಂಟಿ ನಕಲು : ಎಂ.ಬಿ.ಪಾಟೀಲ್

ಹೆಸರಿನಲ್ಲಿ ನಕಲು ಮಾಡಿತು. ದೆಹಲಿಯಲ್ಲೂ ಆ ಪಕ್ಷ ಇದನ್ನೇ ಮಾಡಿದೆ. ಈಗ ಬಿಹಾರವೂ ನಮ್ಮ ಮಾದರಿಯನ್ನೇ ಅನುಕರಿಸಿದೆ ಎಂದು ಅವರು ಟೀಕಿಸಿದ್ದಾರೆ.

ಬಿಜೆಪಿಯವರು ಗ್ಯಾರಂಟಿ ಕೊಟ್ಟರೆ ಮಾತ್ರ ಸರಿ, ನಾವು ಕೊಟ್ಟರೆ ಖಜಾನೆ ಖಾಲಿ ಆಗುತ್ತದೆ ಎನ್ನುವ ಧೋರಣೆ ಸರಿಯಲ್ಲ. ನಾವು ನೀಡುತ್ತಿರುವ ಗ್ಯಾರಂಟಿಗಳು ದೇಶಕ್ಕೇ ಮಾದರಿಯಾಗಿವೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಸರಕಾರಕ್ಕೆ ಎರಡು ವರ್ಷ ತುಂಬಿದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಶನಿವಾರ ಸಮಾವೇಶ ನಡೆಸಲಾಗುತ್ತಿದೆ. ಇದನ್ನು ಟೀಕಿಸುವುದರ ಬದಲು ಮುಖ್ಯಮಂತ್ರಿ ಹೇಳಿದ ಹಾಗೆ ಚರ್ಚೆ ಒಂದು ವೇದಿಕೆಗೆ ಬರಲಿ. ಅವರು ಏನು ಮಾಡಿದ್ದರು? ನಾವು ಏನು ಮಾಡಿದ್ದೇವೆ ಎನ್ನುವುದನ್ನು ಚರ್ಚಿಸಲಾಗುತ್ತದೆ ಎಂದು ಹೇಳಿದರು. ಜನರಿಗೆ ಹೇಳಲು ನಮ್ಮ ಸಾಕಷ್ಟು ಸಾಧನೆಗಳಿವೆ ಎಂದು ಅವರು ಹೇಳಿದ್ದಾರೆ.

ಸಿದ್ದರಾಮಯ್ಯ ಅವರು ಒಬಿಸಿ ವರ್ಗಗಳ ಜನಪ್ರಿಯ ಮತ್ತು ಅಗ್ರಗಣ್ಯ ನಾಯಕರಾಗಿದ್ದಾರೆ. ಹೀಗಾಗಿ ಪಕ್ಷವು ಒಬಿಸಿ ವರ್ಗಗಳ ಶ್ರೇಯೋಭಿವೃದ್ಧಿಗೆ ಪಕ್ಷವು ಇಡಬೇಕಾದ ಹೆಜ್ಜೆಗಳ ಕುರಿತು ಚಿಂತಿಸಲು ಅವರ ನೇತೃತ್ವದಲ್ಲಿ ಸಭೆ ನಡೆಸಿದೆ ಎಂದು ಪಾಟೀಲ ನುಡಿದಿದ್ದಾರೆ.

# ಉಚಿತ ಆರೋಗ್ಯ ತಪಾಸಣೆ ಶಿಬಿರ



**ಯುವ ಮಾರ್ಗ ಸುದ್ದಿ**

**ರಾಯಚೂರು,ಜು.17–** ತಾಲೂಕಿನ ಉಡಮಗಲ್ ಖಾನಾಪುರದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಉಡಮಗಲ್ ಖಾನಾಪೂರದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನ ಡಾ.ಫರ್ಹಾ ನಸ್ರೀನ್ ಸಸಿಗೆ ನೀರು ಹಾಕುವ ಮೂಲಕ ಗುರುವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಪಿಪಲ್‌ಟೂಪಿಪಲ್ ಜಿಈ ಹೆಲ್ತ್ ಕೇರ್ ವತಿಯಿಂದ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಉಡಮಗಲ್ ಖಾನಾಪೂರ ಸಂಯುಕ್ತಾಶ್ರಯದಲ್ಲಿ ಉಚಿತ ಮಹಿಳಾ ಆರೋಗ್ಯ ತಪಾಸಣೆ ಶಿಬಿರದಲ್ಲಿ ಕೀಲು ಮತ್ತು ಮೂಳೆ ಚಿಕಿತ್ಸೆ ,ಕಣ್ಣು ಹಲ್ಲು ,ಬಿಪಿ,ಶುಗರ್, ಮತ್ತು ಹೆಚ್‌ಬಿ ಪರೀಕ್ಷೆ ಹಾಗೂ ಪೌಷ್ಟಿಕ ಆಹಾರದ ಅರಿವು ಮತ್ತು ಮಾನಸಿಕ ಆರೋಗ್ಯ ಮಾಹಿತಿ ಹಾಗೂ ಉಚಿತ ಔಷಧಿ ವಿತರಣೆಯನ್ನ ಈ ಕಾರ್ಯಕ್ರಮದ ಮೂಲಕ ಸಂಸ್ಥೆಯು ಉಚಿತವಾಗಿ ಹಮ್ಮಿಕೊಂಡಿದೆ ಮಹಿಳೆಯರು ತಜ್ಞರಿಂದ ಚಿಕಿತ್ಸೆ ಪಡೆದು ಇದರ ಸದುಪಯೋಗ ಪಡಿಸಿಕೊಳ್ಳಲು ತಿಳಿಸಿದರು.

ನಂತರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉಡಮಗಲ್ ಖಾನಾಪೂರದ ಮುಖ್ಯ ಶಿಕ್ಷಕರು ಹಾಗೂ ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಸಂಚಾಲಕರು ದಂಡ ಎ ಬಿರಾದರ್ ರಾಯಚೂರು ಮಾತನಾಡಿ, ಪಿಪಿಎಚ್ ಎಫ್ ಜಿಇಹೆಲ್ತ್ ಕೇರ್ ಸಂಸ್ಥೆಯ ವ್ಯವಸ್ಥಾಪಕರು ಮಲೈಕಾ ಅಮೀನ್ ನೇತೃತ್ವದ ಸಂಸ್ಥೆಯು ಗ್ರಾಮೀಣ ಮಹಿಳೆಯರಿಗೆ ಶೇ.70ರಷ್ಟು ಆದ್ಯತೆ ನೀಡುವುದರ ಮೂಲಕ ಉಚಿತ ಸೇವೆಯನ್ನ ನೀಡುತ್ತಿದೆ. ಹೆಣ್ಣು ಸಮಾಜದ ಕಣ್ಣು ಇದ್ದಂತೆ ಈ ಹಿನ್ನೆಲೆ ಮಹಿಳೆಯರಿಗೆ ಹಾಗೂ ಹಿರಿಯ ನಾಗರೀಕರಿಗೆ ಬಿಪಿ ಶುಗರ್ ಹಲ್ಲು ನೋವು, ಕಣ್ಣು ಪರೀಕ್ಷೆ, ತಜ್ಞ ವೈದ್ಯರಿಂದ ಕೀಲು ನೋವು ಮೂಳೆ ಚಿಕಿತ್ಸೆ ಜೊತೆಗೆ ಆರೋಗ್ಯ ತಪಾಸಣೆ ಮಾಡಿಸಲಾಗುತ್ತಿದೆ ಇದು ಶ್ಲಾಘನೀಯ ಎಂದು ಹೇಳಿದರು.

ವ್ಯಾಪ್ತಿಯ ವಿವಿಧ ಗ್ರಾಮಗಳಿಂದ ಉಚಿತ ತಪಾಸಣೆಗೆ ಬಂದಿದ್ದ ಜನರಿಗೆ ಮಾನಸಿಕ ಆರೋಗ್ಯ ಕುರಿತು ಆಪ್ತ ಸಮಾಲೋಚಕಿ ಸುವರ್ಣ ಅವರು ಮಾಹಿತಿ ನೀಡಿದರು. ಈ ಶಿಬಿರದಲ್ಲಿ 282ಕ್ಕೂ ಹೆಚ್ಚು ಜನರು ಆರೋಗ್ಯ ತಪಾಸಣೆ ಮಾಡಿಕೊಂಡರು.

ಈ ಸಂದರ್ಭದಲ್ಲಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಡಾ.ಫರ್ಹಾ ನಸ್ರಿನ್ ಡಾ. ಉಮಾನಿ ಸ್ತ್ರೀ ರೋಗ ತಜ್ಞರು, ಡಾ.ವಿನಯ್ ಕುಮಾರ್ ಕೀಲು ಮತ್ತು ಮೂಳೆ ತಜ್ಞರು. ಡಾ.ಕಿರಣ್ ಕುಮಾರ್ ದಂಥವೈದ್ಯರು, ಡಾ.ಆನಂದ್ ದೃಷ್ಟಿ ಆಸ್ಪತ್ರೆ , ದಂಡ ಎ ಬಿರಾದರ್ ಮುಖ್ಯಶಿಕ್ಷಕರು ಹಾಗೂ ಜಿಲ್ಲಾ ಸಂಚಾಲಕರು ರೆಡ್‌ಕ್ರಾಸ್ ಸಂಸ್ಥೆ ರಾಯಚೂರು, ನಾಗರಾಜ್ ಕ್ಷೇತ್ರ ಆರೋಗ್ಯ ಶಿಕ್ಷಣಾದಿಕಾರಿಗಳು,ಸುವರ್ಣ ಮಾನಸಿಕ ಮಾಹಿತಿ ಆಪ್ತ ಸಮಾಲೋಚಕರು, ಪಿಪಿಹೆಚ್‌ಎಫ್ ಸಿಬ್ಬಂಧಿ ನರಸಮ್ಮ ಸಂಧ್ಯಾ ,ಸಲ್ಮಾ ,ಸುರೇಶ್. ಇಂದಿರಮ್ಮ ಆಶಾ ಕಾರ್ಯಕರ್ತರು ಸ್ವಯಂಸೇವಕರು ಸೇರಿದಂತೆ ಇನ್ನಿತರರು ಇದ್ದರು.

# ಡ್ರಗ್ಸ್ ಪ್ರಕರಣ;ವೃಥಾ ನನ್ನ ತೇಜೋವಧೆ;ಅಲ್ಲಮಪ್ರಭು ಕಿಡಿ

**ಕಲಬುರಗಿ,ಜು.17–** ಡ್ರಗ್ಸ್ ದಂಧೆಯಲ್ಲಿ ನಾನು ಯಾರಿಗೂ ಪ್ರಭಾವ ಬೀರಿಲ್ಲ. ಸುಖಾ ಸುಮ್ಮನೆ ನನ್ನ ತೇಜೋವಧೆ ಮಾಡಲಾಗುತ್ತಿದೆ ಎಂದು ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ಹೇಳಿಕೆಗೆ ಶಾಸಕ ಅಲ್ಲಮಪ್ರಭು ಪಾಟೀಲ ಕಿಡಿಕಾರಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಡ್ರಗ್ ಸಾಗಣೆ ಪ್ರಕರಣದಲ್ಲಿ ಮುಂಬೈ ಪೊಲೀಸರಿಂದ ಬಂಧಿತನಾದ ಲಿಂಗರಾಜ ಕಣ್ಣಿ ನನ್ನ ಆಪ್ತ ಇದ್ದದ್ದು ನಿಜ. ಮಹಾರಾಷ್ಟ್ರ ಸರ್ಕಾರ ಯಾವುದೇ ತನಿಖೆ ಮಾಡಲಿ .ತಾಕತ್ತಿದ್ರೆ ಕಲಬುರಗಿಯಲ್ಲಿನ ಡ್ರಗ್ಸ್ ಕೇಸ್ ಸಹ ತನಿಖೆ ಮಾಡಲಿ. ಸರ್ಕಾರಕ್ಕೆ ಸಿಬಿಐ ತನಿಖೆ ಮಾಡುವಂತೆ ಪತ್ರ ಬರೆಯುತ್ತೇನೆ ಎಂದರು.




ನನಗೆ ತಾಕತ್ತಿದೆ ಅನ್ನೋ ಕಾರಣಕ್ಕೆ ದತ್ತಾತ್ರೇಯ ಪಾಟೀಲ ಅವರನ್ನು 24 ಸಾವಿರ ಮತಗಳಿಂದ ಸೋಲಿಸಿರುವೆ.ನಮ್ಮ ಸರ್ಕಾರ ಬಂದ ಮೇಲೆ ಡ್ರಗ್ಸ್ ಪ್ರಕರಣಗಳಿಗೆ ಬ್ರೇಕ್ ಹಾಕಲಾಗಿದೆ ಎಂದರು.

# ಜೈ ಜವಾನ ಜೈ ಕಿಸಾನ ಸಾವಯವ ಕೃಷಿ ಸಮ್ಮೇಳನ ಭೂಮಿ ತಾಯಿ ಉಳಿಸಿ ಅಭಿಯಾನ ಇಂದು

**ಕಲಬುರಗಿ,ಜು.17–**ನವ ಕರ್ನಾಟಕ ರೈತ ಸಂಘದ ವತಿಯಿಂದ ಜು.18 ರಂದು ಬೆಳಿಗ್ಗೆ 10.30ಕ್ಕೆ ನಗರದ ಕನ್ನಡ ಭವನದಲ್ಲಿ ಜೈ ಜವಾನ ಜೈ ಕಿಸಾನ ಸಾವಯವ ಕೃಷಿ ಸಮ್ಮೇಳನ ಭೂಮಿ ತಾಯಿ ಉಳಿಸಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ದಯಾನಂದ ಪಾಟೀಲ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದಾನೊಂದು ಕಾಲದಲ್ಲಿ ಭಾರತ ದೇಶವು ಸಮೃದ್ಧ ದೇಶವಾಗಿತ್ತು. ಅದು ಕೃಷಿಯಿಂದ ಹೆಸರುವಾಸಿಯಾಗಿತ್ತು ಭಾರತ ದೇಶದ ರೈತರು ಅನುಸರಿಸುವ ಕೃಷಿ ಪದ್ಧತಿಗಳು ಅತಿ ಶ್ರೇಷ್ಠವಾಗಿದ್ದವು ಎನ್ನುವುದಕ್ಕೆ ಅನೇಕ ವಿದೇಶಿ ವಿಜ್ಞಾನಿಗಳು ಬರೆದಿರುವ ಉಲ್ಲೇಖಗಳು ಸಿಗುತ್ತದೆ. ಕಾಲಾಂತರದಲ್ಲಿ ಅನೇಕ ಕಾರಣಗಳಿಂದ ರಸಾಯನಿಕ ಕೃಷಿ ಪರಿಕರಗಳು ನಮ್ಮ ದೇಶದ ಕೃಷಿಯ ಭಾಗವಾದವು ಮೊದ ಮೊದಲು ಇದರಿಂದ ಲಾಭವೆ ಹೆಚ್ಚೆಂದು ಎಲ್ಲರೂ ತಿಳಿದರು. ಇಂದಿಗೂ




ಕೆಲವರು ಹಾಗೆಯೇ ತಿಳಿದಿದ್ದು ವಿಪರ್ಯಾಸ. ಈ ರಸಾಯಿನಿಕ ಗೊಬ್ಬರ ಕೀಟನಾಶಕ, ಕಳೆನಾಶಕ ಇತ್ಯಾದಿಗಳಿಂದ ಅನೇಕ ಸಮಸ್ಯೆಗಳು ಉಂಟಾಗಿದ್ದು, ಅನೇಕ ಉದಾಹರಣೆಗಳ ಮೂಲಕ ದೃಢಪಟ್ಟಿದೆ. ಮಣ್ಣು, ಫಲವತ್ತತೆ ಕಡಿಮೆಯಾಗಿದೆ. ಮಣ್ಣಿನ ಸವಕಳಿ ಹೆಚ್ಚಾಗಿದೆ. ನೀರು ಕಲುಷಿತಗೊಂಡಿದೆ. ಮನುಷ್ಯ ಮತ್ತು ಇತರೆ ಪ್ರಾಣಿಗಳಲ್ಲಿ ರೋಗಗಳು ಹೆಚ್ಚಾಗಿವೆ. ಕೃಷಿ ಖರ್ಚು ಹೆಚ್ಚಾಗಿದೆ. ಆದಾಯ ಕಡಿಮೆಯಾಗಿದೆ. ಕೃಷಿ ಉತ್ಪನ್ನಗಳ ರಫ್ತು ಕಡಿತಗೊಳ್ಳುತ್ತಿವೆ. ಅದಕ್ಕಾಗಿ ಸಾಯವ ಕೃಷಿಗೆ ರೈತರು ಹೋಗುವುದು ಸೂಕ್ತವಾಗಿರುತ್ತದೆ. ಇಂತಹ ಸಮಯದಲ್ಲಿ ಇದಕ್ಕೆ ಪರಿಹಾರ ಕಂಡುಕೊಳ್ಳುವುದು ನಮ್ಮ ನಿಮೆಲ್ಲರ ಆದ್ಯ ಕರ್ತವ್ಯವಾಗಬೇಕು. ರೈತ ಆರ್ಥಿಕತೆಗಾಗಿ, ಜನಸಾಮಾನ್ಯರ ಆರೋಗ್ಯಕ್ಕಾಗಿ, ಸಾವಯವ ಕೃಷಿಯನ್ನು ಉತ್ತೇಜಿಸುವುದು ಸರಕಾರದ ಅಧ್ಯ ಕರ್ತವ್ಯವಾಗಬೇಕು.

ಇದರಲ್ಲಿ ಕೆಲವು ಅಪನಂಬಿಕೆಗಳಿವೆ. ಅವುಗಳೆಂದರೆ ಸಾವಯವದಲ್ಲಿ ಇಳುವರಿ ಕಡಿಮೆಯಾಗುತ್ತದೆ. ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಹೇಗೆ ಒದಗಿಸುವುದು, ದುಡಿಯಲು ಕೃಷಿ ಕಾರ್ಮಿಕರ ಕೊರತೆ ಇತ್ಯಾದಿ. ಎಂದು ಆದರೆ ಸಾವಯವ ಕೃಷಿಯ ಅರ್ಥ ಸರಿಯಾಗಿ ಮಾಡಿಕೊಂಡು ಕೃಷಿ ಮಾಡಿದ್ದೆ ಆದರೆ, ರಸಾಯನಿಕ ಕೃಷಿಗಿಂತಲೂ ಹೆಚ್ಚಿನ ಆದಾಯ ಪಡೆಯಬಹುದು ಸಾವಯವ ಕೃಷಿ ಪರಿಕರಗಳಾದ ಜೀವಾಮೃತ, ಬೀಜಾಮೃತ, ದಶಪರಣಿ, ಮಿನೆಣ್ಣೆ ಟಾನಿಕ ಇತ್ಯಾದಿಗಳನ್ನು ಮಾಡಿಕೊಳ್ಳುವುದು. ಕೃಷಿ ಭೂಮಿಯಲ್ಲಿ ಸಿಗುವ ಎಲ್ಲಾ (ಕಾಳೆಗಳ ಸಹಿತ) ಸಸ್ಯಗಳ ಆರ್ಥಿಕ ಲಾಭ ಬಳಕೆಯ ವಿಧಾನ ತಿಳಿದುಕೊಳ್ಳಬೇಕು. ಆಧುನಿಕ ಕೃಷಿಯ ಜೊತೆ, ಪಾರಂಪರಿಕ ಕೃಷಿ ಪದ್ಧತಿಗಳನ್ನು ಅಳವಡಿಸುವುದನ್ನು ಕಲಿಯಬೇಕು, ಗೋವು, ಕುರಿ, ಕೋಳಿ ಕೃಷಿಯ ಅಂಗಭಾಗವಾಗಬೇಕು. ಕೃಷಿಯಿಂದ ದುಡಿಯುವುದಲ್ಲ, ಬುದ್ದಿವಂತಿಕೆಯಿಂದ ದುಡಿಯುವುದನ್ನು ಕಲಿಯಬೇಕು ಹಾಗಾಗಿ ಈ ನಾಳೆಯ ಕಾರ್ಯಕ್ರಮ ಸವಾಯವ ಕೃಷಿ ಸಮ್ಮೇಳನ ಇದರಲ್ಲಿ ಹೆಚ್ಚಿನ ಜನರು, ರೈತರು ಭಾಗಿಯಾಗಿ ಲಾಭಪಡೆದುಕೊಳ್ಳಬೇಕೆಂದು ಅವರು ಮನವಿ ಮಾಡಿದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಬಿ.ಜಗದೀಶ, ಮುಖಂಡರಾದ ಶಿವರಾಜ ನೆಲ್ಲೂರ, ಬಾಲಾಜಿ ಪಾರ್ಯವಂತಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಮಕ್ಕಳಿಗಾಗಿ ಪೋಷಕರ ನಿರ್ವಹಿಸಬೇಕಾದ ಕರ್ತವ್ಯಗಳು

ಇಂದಿನ ಆಧುನಿಕ ಜಮಾನದಲ್ಲಿ ಮಕ್ಕಳು ಚಿಕ್ಕ ವಯಸ್ಸಿನಲ್ಲೇ ದಾರಿ ತಪ್ಪುತ್ತಿರುವುದು ಕಳವಳಕಾರಿ ಸಂಗತಿ ಇದಕ್ಕೆ ಮನೆಯ ಮೊದಲ ಪಾಠ ಶಾಲೆ ಎನ್ನುವಂತೆ ಮಕ್ಕಳನ್ನು ತಿದ್ದಿ ತೀಡುವ ಕರ್ತವ್ಯ ಪಾಲಕರದ್ದಾಗಿ. ಈ ಕುರತಿ ಕೆಲವೊಂದ ಅಂಶಗಳನ್ನು ಪಾಲನೆ ಮಾಡಿದರೆ ಮಕ್ಕಳ ಬಾಳು ಬೆಳಗುವುದರಲ್ಲಿ ಸಂಶಯವಿಲ್ಲ.

1. ಮಕ್ಕಳಿಗಾಗಿ ಸಮಯ ಕೊಡಿ.,2. ಮಕ್ಕಳಿಗೆ ಪ್ರೋತ್ಸಹ ನೀಡಿ

3. ಮಕ್ಕಳ ಅಲೋಚನೆಗಳನ್ನು ಪರಿಶೀಲಿಸಿ,4. ಮಕ್ಕಳಿಗೆ ಸ್ವಂತಿಕೆ ಕಲಿಸಿ

5. ನಿರ್ಧಾರ ತೆಗೆದುಕೊಳ್ಳವು ಕೌಶಲ್ಯ ಬೆಳಿಸಿ,6. ಮಕ್ಕಳ ಮುಂದೆ ಪೋಷಕರ ದುಶ್ಚಟಗಳು ತಿಯದಿರಲಿ

7. ಮಕ್ಕಳ ಕಲಿಕೆಯಲ್ಲಿ ನೀವು ಭಾಗಿಯಾಗಿ, 8. ಮಕ್ಕಳು ಶಾಲ ಕಾರ್ಯ ನೋಟ್ಸ್ ಹೋಮ್ ವರ್ಕ್ ಮಾಡುವಾಗ ನೀವು ಟಿ.ವಿ. ಮೊಬೈಲ್ ಬಳಸಬೇಡಿ

9. ಮಗುವಿನ ಮುಂದೆ ಪೋಷಕರ ಅವಾಚ್ಯಾ ಶಬ್ದಗಳು ಬಳಕೆಯಾಗದಿರಲಿ

10. ಮಗುವಿನ ಮುಂದೆ ನಿಮ್ಮ ವೈಯಕ್ತಿಕ ಜಗಳಗಳನ್ನು ಕಾಣದಿರಲಿ

11. ಮಗುವಿಗೆ ಪೋಷಕರು ತಮ್ಮ ವೈಯಕ್ತಿಕ ಶ್ರಮ ತ್ಯಾಗದ ಬಗ್ಗೆ ಮನವರಿಕೆ ಮಾಡಿ.

12. ನಿಮ್ಮ ಆರ್ಥಿಕ ಪರಿಸ್ಥಿತಿ ತಿಳಿಸಿ ಅವರ ದೊಡ್ಡ ಐಶರಾಮಿ ಬದುಕು ಆಸೆ ಪಡುವುದಿಲ್ಲ., 13. ಮಗು ಹಿರಿಯ ಜೀವಿಗಳೊಂದಿಗೆ (ಅಜ್ಜಿ ತಾತ) ನ ಬಗ್ಗೆ ಕಾಲಕಳೆಯಬೇಕು ಅವರೊಂದಿಗೆ ಕಥೆ ಇತಿಹಾಸ ತಿಳಿದುಕೊಳ್ಳಬೇಕು.

14. ಮಕ್ಕಳಿಗೆ ಕಾಣುವ ರೀತಿ ತಂದೆ ತಾಯಿಗಳು ಅವರ ತಂದೆವತಾಯಿಗಳ ಸೇವಾ ಮಾಡಬೇಕು ಮಕ್ಕಳಿಗೆ ಪರಿಣಾಮ ಬೀರಿ ನಾಳೆ ನಿಮ್ಮನ್ನು ನೋಡಿಕೊಳ್ಳುವಂತಾಗಬೇಕು.

15. ಮಕ್ಕಳಿಗೆ ಬೈಯುವ ಒಡೆಯುವ ಸಂಧರ್ಭ ಬಂದಾಗ ಶಿಕ್ಷೆ ಕೊಡಬೇಕು ಇಲ್ಲದಿದ್ದರೆ ಮುಂದಿನ ದಿನಮಾನದಲ್ಲಿ ಪೋಲಿಸರು ಶಿಕ್ಷಿಸುವಂತಾಗಬಾರದು.

16. ಮಕ್ಕಳಿಗಾಗಿ ಅತೀ ಪ್ರೀತಿ ಬೇಡ ತೀರ ದೂರ ಮಾಡಬೇಡಿ.

17. ನಿಮ್ಮ ಮಕ್ಕಳ ಮುಂದೆ ಬೇರೆ ಮಕ್ಕಳನ್ನು ಹೋಲಿಸಬೇಡಿ ಅದು ಸಕರಾತ್ಮಕ ಇರಲಿ ಅಲ್ಪ ಇರಲಿ., 18. ನೀವು ನಿಮ್ಮ ಮಗುವಿಗೆ ಇಟ್ಟ ಹೆಸರಿನ ಅರ್ಥ ಮತ್ತು ಇತಿಹಾಸ ತಿಳಿಸಿ, 19. ಮಗುವಿನ ಎಲ್ಲಾ ಪ್ರಶ್ನೆಗಳಿಗೆ ಆಸಕ್ತಿಯಿಂದ ಸಮಾದನ ಹೇಳಿ.

20. ಮಕ್ಕಳ ಮುಂದೆ ಮೊಬೈಲ್ ಬಳಸಿ ಅವರಿಗೆ ಮೊಬೈಲ್ ಂಜಜುಥಿಣ ಬೇಡ ಎಂದರೆ ಕೇಳುವುದಿಲ್ಲ ನೀವು ಆತರ ನಡೆದುಕೊಳ್ಳಿ

21. ಮಗುವಿನ ಸ್ನೇಹಿತನ ಬಗ್ಗೆ ಕೀಳಾಗಿ ಮಾತನಾಡಬೇಡಿ.

22.ಮಕ್ಕಳಿಗೆ ಏನು ತಿನ್ನಿಸಬೇಕು ಏನು ತಿನ್ನಿಸಬಾರದು ಎಂಬುದು ಪಾಲಿಸಿ

23.ಮಕ್ಕಳೊಂದಿಗೆ ವಾದಕ್ಕಿಳಿಬೇಡಿ ಉದಹಾರಣೆ ಸಮೇತ ಅರ್ಥೈಸಲು ಪ್ರಯತ್ನಿಸಿ

24.ಮಕ್ಕಳು ನಿಮ್ಮ ಹಾಗೆ ಆಗಲಿ ಆದರೆ ನಿಮಗೆ ಹೇಗೆ ಬೇಕು ಆಗೇ ಮಾಡುತ್ತೇನೆಂಬ ಪಲಭ್ರಮೆ ಬಿಟ್ಟು ಬಿಡಿ. ಅವರಿಗೆ ಹೇಗೆ ಆಗಬೇಕೆಂಬ ಬಯಕೆ ಗುರಿ ಇದೆ ಹಾಗೇ ಆಗುತ್ತಾರೆ., 25.ಮಕ್ಕಳವ ಮೇಲೆ ಸಂಶಯ ಬೇಡ ನಿಗರಾಣೆ ಇರಲಿ

26. ಮಗುವಿನ ಕೈಗೆ ಮೊಬೈಲ್ ಕಸಿದುಕೊಳ್ಳಬೇಡಿ ಆದರೆ ಏನನ್ನು ನೋಡಬೇಕು ಏನು ನೋಡಬಾರದು ಎಂದು ತಿಳಿಸಿ

27. ಶಾಲಾ ತರಗತಿಯ ಬಗ್ಗೆ ಮಾಹಿತಿ ಪಡೆದುಕೊಳ್ಳಿ

28. ನೋಟ್ಸ್ ನೀವು ಒಮ್ಮೆ ಗಮನರಿಸಿ ನೋಡಿ, 29. ಶಾಲೆ ಬಗ್ಗೆ ದಿನಾಲೂ ಕೇಳಿ ಏನೇನ್ ಆಯಿತು ಖುಷಿ ವಿಚಾರಗಳನ್ನು ಹಂಚಿಕೊಳ್ಳಿ

30. ನಿಮ್ಮ ಕನಸ್ಸುಗಳನ್ನು ಮಕ್ಕಳ ಕಣ್ಣಲ್ಲಿ ಹಾಕಿ, 31. ಮಕ್ಕಳ ಒಳಿತನ್ನು ಅನ್ಯರ ಮುಂದೆ ಹೊಗಳಿ

32. ಮಕ್ಕಳನ್ನು ಎಲ್ಲಾರ ಮುಂದೆ ದೂರಬೇಡಿ ಬೈಯಿದು ಒಡೆಯುವುದು ಅಗೌರವವಾಗಿ ನಡೆದುಕೊಳ್ಳಬೇಡಿ.

33. ನಿನ್ನ ಧರ್ಮ ನೀ ಚನ್ನಾಗಿ ಅದ್ಯಾಯನ ಮಾಡಿ ಪಾಲಿಸಿ ಅನ್ಯ ಧರ್ಮ ಧರ್ಮಿಯರನ್ನು ಗೌರವಿಸುವುದನ್ನು ಕಲಿಸಿ. ಇದೆ ಭಾವೈಕ್ಯತೆ

34. ಮಕ್ಕಳ ದೇಷ್ಟಿಯಲ್ಲಿ ಶಿಕ್ಷಕರನ್ನು ಸಣ್ಣವರನನ್ನಾಗಿಸದಿರಿ.

35. ಮಕ್ಕಳನ್ನು ಹುರಿದುಂಬಿಸಿ, 36. ಮಕ್ಕಳು ತನ್ನ ತಂದೆ ತಾಯಿಯ ಹಾಗೆ ಗುಣ ನಡತೆ ಪ್ರಮಾಣಿಕತೆ ಸತ್ಯದ ಹಾದಿ ದಾನ ಮಾಡುವ ಎಲ್ಲಾ ಸದ್ಗುಣಗಳು ಅವರಲ್ಲಿ ಬರುವಂತಾಗಲಿ.

37. ಅಂಕಗಳಿಂದ ಬಿಳಬೇಡಿ ಆದರೆ ಮಕ್ಕಳಿಗೆ ನೈತಿಕ ಸಮಾಜಿಕ ಅಮೂಲ್ಯ ಜೀವನದ ದರ್ಶನ ಮಾಡಿಸಿ., 38. ಮಗುವಿಗೆ ಮರಳು ನೀರಲ್ಲಿ ಆಟವಾಡಲು ಬಿಡಿ. ತೀರ ಅಲ್ಲ ಅಲ್ಪ., 39. ಪೋಷಕರೆ ನೀವೇ ನಿಮ್ಮ ಮಕ್ಕಳಿಗೆ ವಿಲನ್ ಆಗದೇ ಇರುವ ಹಾಗೆ ನಡೆದುಕೊಳ್ಳಿ., 40. ಮಕ್ಕಳಿಗೆ ಮಾರ್ಕೆಟಿಂಗ್(ಅಂಗಡಿ ವ್ಯವಹಾರ) ಮಾಡುವುದನ್ನು ಕಲಿಸಿ.,41. ಸಾಧನೆಗಳೆಂದರೆ ಯಾವುವು ಎಂಬುದನ್ನು ಸಾಕಷ್ಟು ಉದಾಹರಣೆ ಕೊಡಿ

42. ದುಶ್ಚಟಗಳಿಂದ ದೂರ ಇಡಿ ಅದರ ದುಶ್ಪರಿಣಾಮ ತಿಳಿಸಿ

43. ಮನೆ ಹೋರ ಆಟೋಟಗಳಿಗಾಗಿ ಅವಕಾಶ ಕೊಡಿ.

44. ಎಲ್ಲರೊಂದಿಗೆ ಬೆರೆಯಲು ಮುಕ್ತತೆ ಇರಲಿ, 45. ಎಲ್ಲರೊಂದಿಗಿರಲಿ ಅವರ ಅವಗುಣಗಳನ್ನು ಅನುಸರಿಸಲಾಗದಂತೆ ನೋಡಿಕೊಳ್ಳಿ

46. ಪ್ರಾಣಿ ಪಕ್ಷಿಗಳ ಪ್ರೇಮ ಬೆಳಿಸಿ, 47. ಜೀವದ ಬೆಲೆ ಏನು ಎಂಬುದನ್ನು ತಿಳಿಸಿ.

48. ಎಲ್ಲಾ ಧರ್ಮಗ್ರಂಥಗಳನ್ನು ಓದಿಸಿ ಸ್ವಧರ್ಮ ಪಾಲಿಸಲಿ.

49. ಅನ್ನ ಊಟದ ಮೌಲ್ಯ ತಿಳಿಸಿ ವ್ಯರ್ತವಾಗದಂತೆ ಮುತುವರ್ಜಿ ವಹಿಸಿ.

50. ಮಗು ರಾತ್ರಿ ಬೇಗ ಮಲಗಲಿ ಬೇಗ ಏಳುವಂತನಾಗಲಿ ನೀವು ಸಹಾ

51. ಮಕ್ಕಳ ದೇಷ್ಟಿಯಲ್ಲಿ ತಂದೆ ತಾಯಿ ಗ್ರೇಟ್ ಎಂಬುದು ಆಗಾಗ ನಿದರ್ಶನಗಳ ಮೂಲಕ ತಿಳಿಸಿ.ಮ, 52. ಮಕ್ಕಳ ಮುಂದೆ ಬಿಕ್ಷುರಿಗೆ ನೀವು ದಾನ ಮಾಡಿ ಅವರನ್ನು ಕಲಿಸಿ.

53. ಮಕ್ಕಳು ಮೊಬೈಲ್ ನಲ್ಲಿ ಏನನ್ನು ನೊಡುತ್ತಿದ್ದಾರೆ ಎಂದು ಗಿತ್ತಾಗದ ಹಾಗೆ ನಿಗವಹಿಸಿ., 54. ನಿಮಗಿಂತ ಹೆಚ್ಚಿನ ಕೆಳಗಿರುವವರ ಮನೆಗಳನ್ನು ತೋರಿಸಿ. ಅವರಿಗೆ ನಾವೇ ಉತ್ತಮರೆನಿಸು ಹಾಗೆ ಮಾಡಿ.

55. ಜ್ಞಾನ ಎಲ್ಲದಕ್ಕಿಂತ ದೊಡ್ಡದು., 56. ದಾರ್ಶನಿಕರು, ಸಂತರು, ಸ್ವಾತಂತ್ರ್ಯ ಹೋರಾಟಗಾರರು ದೇವಮಾನವರ ಬಗ್ಗೆ ವಿಸ್ತಾರವಾಗಿ ಹೇಳಿ.

57. ಎಲ್ಲಾ ವಿಷಯಕ್ಕೆ ಸಮಾನವಾದ ಸಮಯ ಮತ್ತು ಆಸ್ತಿ ಕೇಂದ್ರಿ ಕರಿಸಿ.

58. ಕೇಳು ಓದು ಹೇಳು ಈ ಕೌಶಲ್ಯಗಳಿ ಒತ್ತು ಕೊಡಿ.

59. ಸುಳ್ಳಿನ ದುಶ್ಪರಿಣಾಮ ಮನಮುಟ್ಟುಂತೆ ಮನವರಿಕೆ ಮಾಡಿ

60. ಕಳ್ಳತನ ಮಹಾಪಾಪ., 61. ಜಗತ್ತು ಪರಿಚಾಯಿಸಿ ಜಗತ್ತಲ್ಲಿ ಹೇಗಿರಬೇಕು ಎಂಬುದನ್ನುಬಕಲಿಸಿ, 62. ಪರಿಸರ ಕಾಳಜಿ ಮೂಡಿಸಿ.

63. ಶಾಲೆಯ ಎಲ್ಲಾ ಚಟುವಟಿಕೆಯಲ್ಲಿ ಭಾಗಿಯಾಗಲು ಧರ್ಯ ತುಂಬಿ. ಭಾಗವಹಿಸುವಿಕೆ ಗೆಲುವಿಗೆ ಸಮ., 64. ಕಲೆಯನ್ನು ಅನುಭವಿಸಿ ಗೌರವಿಸುವ ಮನೋಧರ್ಮ ಬರಲಿ

65. ಎಲ್ಲಾ ಭಾಷೆಗಳು ಕಲಿಯಲಿ ಮಾತೃಭಾಷೆ ಮೊದಲ ಆದ್ಯತೆ ಇರಲಿ.

66. ದೊಡ್ಡ ದೊಡ್ಡ ಕನಸ್ಸು ಕಟ್ಟಲಿ ಸ್ವಂತಿಕೆ ಯಿಂದ ನನಸು ಮಾಡಿಕೊಳ್ಳಲಿ ಪೋಷಕರ ದುಡ್ಡಲ್ಲಿ ಏಂಜೊಯ್ ಅಲ್ಲ.

67. ನೈಸರ್ಗಿ ಸಂಪತ್ತು ಹಾಳಗದಂತೆ ಮುತುವರ್ಜಿ ವಹಿಸಿ ಮುಂದಿನ ಪೀಳಿಗೆಗೆ ಉಳಿಸುವ ನಿಟ್ಟಿನಲ್ಲಿ ಮನಹೊಲಿಸಿ.

68. ಸೋಲು ಗೆಲವು ಸಮಾನವಾಗಿ ಸ್ವೀಕರಿಸುವ ಗುಣ ಬೆಳಿಸಿ.

69. ಗೆಲುವು ಎಂದರೆ ಶ್ರಮದ ಹಿಂದೆ ಇದೆ ಎಂಬುದು ಅರ್ಥೈಸಿ ಆಗ ಗೆಲವು ಸಂತೋಷ ಕೊಡುತ್ತೆ.

70. ಉತ್ತಮ ಮಾತುಗಾರಿಕೆ, ಅಶ್ಯಕತೆಗೆ ತಕ್ಕಷ್ಟು ಮಾತು, ಮದ್ಯದಲ್ಲಿ ಮಾತು ಬೇಡ ಇವುಗಳ ಬಗ್ಗೆ ಹೇಳಿಕೊಡಿ.

71. ಮನುಷ್ಯನ ಅಂಗಾಂಗಗಳನ್ನು ಸರಿ ಎನಿಸಿ ಉತ್ತಮ ವಿಷಯಗಳಿಗೆ ಮಾತ್ರ ಬಳಸಲು ಹೇಳಿ., 72. ತೋರ್ಪಡಿಕೆ ಸೂಕ್ತವಾದುದ್ದಲ್ಲ ಎಂಬುದು ತಿಳಿಸಿ.

73. ಪೋಷಕರ ಕೆಲಸದಲ್ಲಿ ಭಾಗಿಯಾಗುವಂತೆ ಮಾಡಿ.

74. ವೃದ್ಧರು, ಅಂಗವಿಕಲರು, ಅಸಹಾಯಕರಿಗೆ ಸಹಾಯ ಮಾಡುವಂತ ಗುಣ ಬೆಳಿಸಿ., 75. ಎಲ್ಲಿ ಹೇಗಿರಬೇಕು ಎಂಬುದನ್ನು ಕಲಿಸಿ

76. ಉತ್ತಮ ಗೆಳೆಯರನ್ನು ಆಯ್ಕೆ ಮಾಡುವ ಸಲಹೆ ನೀಡಿ.

77. ಸಂಪೂರ್ಣ ಜ್ಞಾನ ಪಡೆಯಲಿ ಒಳ್ಳೆಯದಕ್ಕಾಗಿ ಮಾತ್ರ ಬಳಕೆಯಾಗಲಿ.

78. ಶಿಸ್ತು ಸಂಯಮ ಮೊದಲ ಆದ್ಯತೆಯಾಗಿರಲಿ

79. ಸ್ವಚ್ಚತೆಗೆ ಬಗ್ಗೆ ಕಾಳಜಿ ಇರಲಿ., 80. ದೇಶ ಪ್ರೇಮದ ಬೀಜ ಎದೆಯಲ್ಲಿ ಹಾಕಿ ಪೋಷಿಸಿ, 81. ಇಲಾಖೆ ಅದರ ಕೆಲಸಗಳ ಬಗ್ಗೆ ಜ್ಞಾನ ತುಂಬಿ

82. ಸಾರ್ವಜನಿಕ ಸ್ಥಳ ಮತ್ತು ವಸ್ತುಗಳನ್ನು ಹಾನಿ ಮಾಡುವುದು ಅಪರಾಧ ಎಂಬುದು ತಿಳಿಸಿ.

83. ಅಪರಾಧಗಳ ಬಗ್ಗೆ ಮಾಹಿತಿ ಕೊಡಿ

84. ಕಂಪ್ಯೂಟರ್ ಸ್ಪೋಕನ್ ಇಂಗ್ಲಿಷ್ ಇನ್ನಿತರ ಕೌಶಲ್ಯ ತರಬೇತಿಯಲ್ಲಿ ಭಾಗಿಗಳಾಗಿಸಿ.

85. ರಾಜಕೀಯ ವಿಷಯಗಳ ಬಗ್ಗೆ ಕಣ್ಣಿಗೆ ತೋರಿಸಿ ಹೇಳಿ.

86. ಸಮಾಜ ಸೇವೆಯಲ್ಲಿ ತನ್ನ ಪಾತ್ರ ಏನು ಎಂಬುದನ್ನು ನಿಮ್ಮ ಪಾತ್ರದಲ್ಲಿ ತೋರಿಸಿ, 87. ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳಲು ತಿಳಿಸಿ

88. ನಾಲಿಗೆಯಿಂದ ಮನೆ ಮುರಿಲು ಬಹುದು ಮನ ಜೋಡಿಸಲು ಬಹುದು ಎಂಬುದನ್ನು ತಿಳಿ ಹೇಳಿ, 89. ಮಾತಾ ಪಿತಾ ಸಂತೋಷದ ಗರ್ವ ಪಡುವ ಕೆಲಸ ಮಾಡಲಿ, 90. ಬರವಣಿಗೆ ಉತ್ತಮ ರೀತಿಯಲ್ಲಿರುವ ಹಾಗೆ ಇರಿಸಿ

91. ಕಾಗುಣಿತಾಕ್ಷರದ ಬೆಲೆ ತೋರಿಸಿ., 92. ಪತ್ರಿಕೆ, ಪುಸ್ತಕ ಓದುವ ಹವ್ಯಸ ಬೆಳಿಸಿ.

93. ಹಿರಿಯರಿಂದ ಮಾರ್ಗದರ್ಶನ ಕಿರಿಯರಿಂದ ಅಭಿಪ್ರಾಯ ಸ್ವೀಕರಿಸುವ ಗುಣ ಬೆಳೆಸಿ., 94. ಒಪ್ಪಿಕೊಳ್ಳುವ ಪ್ರಮುಖ ಗುಣ ಬೆಳೆಸಿ

95. ಛಲ & ಹಠ ಸಕರಾತ್ಮಕವಾಗಿರಲಿ, 96. ಆರೋಗ್ಯಕರ ಸ್ಪರ್ಧೆ ಕಡೆ ಇರಲಿ

97. ಆರೋಗ್ಯದ ಬಗ್ಗೆ ಕಾಳಜಿ ಬಹುಮುಖ್ಯ., 98. ಅಳು ನಗುವಿನ ಪ್ರಾಮುಖ್ಯತೆ ತಿಳಿದಿರಲಿ.99. ಎಲ್ಲಾರನ್ನು ನೋಡಿ ಕಲಿಲಿ ಆದರೆ ತನ್ನಂತೆ ತಾನಾಗಲಿ

ಲೇಖಕರು
– ಮಹಿಬೂಬ್ ಮದ್ಲಾಪುರ
ಸಂಪನ್ಮೂಲ ವ್ಯಕ್ತಿಗಳು ಮಾನ್ವಿ

# ಮುಡಾದ 252 ನಿವೇಶನಗಳ ಪಟ್ಟಿ ಬಿಡುಗಡೆಗೆ ಕೋರಿ ಪತ್ರ



**ಮೈಸೂರು,ಜು. 17**–ರಾಜ್ಯ ರಾಜಕೀಯದಲ್ಲಿ ಸಂಚಲನಕ್ಕೆ ಕಾರಣವಾಗಿದ್ದ ಮುಡಾ ಹಗರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು ಮುಟ್ಟುಗೋಲು ಹಾಕಿಕೊಂಡಿರುವ 252 ನಿವೇಶನಗಳ ಮಾಹಿತಿಯನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಬೇಕು ಎಂದು ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಜಾರಿ ನಿರ್ದೇಶನಾಲಯಕ್ಕೆ ಪತ್ರ ಬರೆದಿದ್ದಾರೆ.

ಇಡಿ ಮುಟ್ಟುಗೋಲು ಹಾಕಿಕೊಂಡಿರುವ ಸ್ವತ್ತುಗಳಲ್ಲಿ ಅವುಗಳ ವಿವರಗಳ ಫಲಕಗಳನ್ನು ಅಳವಡಿಸಲು, ಮುಟ್ಟುಗೋಲು ಹಾಕಿಕೊಂಡಿರುವ ಸ್ವತ್ತುಗಳ ವಿವರಗಳನ್ನು ಮಾಧ್ಯಮಗಳ ಮೂಲಕ ಪ್ರಕಟಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಿದ ಆಯುಕ್ತರಿಗೆ ಕೂಡಲೇ ಸೂಕ್ತ ಸೂಚನೆ ನೀಡಬೇಕು ಎಂದು ಸ್ನೇಹಮಯಿ ಕೃಷ್ಣ ಮನವಿ ಮಾಡಿದ್ದಾರೆ.

ಪತ್ರದ ವಿವರ:ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿನ ನಿವೇಶನಗಳ ಹಂಚಿಕೆ ಅಕ್ರಮಗಳ ಸಂಬಂಧ ತಾವು (ಇಡಿ) ತನಿಖೆ ನಡೆಸುತ್ತಿರುವುದು ಸರಿಯಷ್ಟೆ. ಇದುವರೆಗೂ ನಡೆಸಿದ ತನಿಖೆಯಿಂದ ಸಂಗ್ರಹವಾಗಿರುವ ಸಾಕ್ಷ್ಯಾಧಾರಗಳನ್ನು ಆಧರಿಸಿ, 50:50 ಅನುಪಾತದಲ್ಲಿ ಹಂಚಿಕೆ ಮಾಡಿರುವ ಸಾವಿರಾರು ನಿವೇಶನಗಳಲ್ಲಿ ಮೊದಲಿಗೆ 160, ಇತ್ತಿಚೆಗೆ 92 ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಂಡಿರುವುದು ಸರಿಯಷ್ಟೆ.

ಆದರೆ ಸದರಿ ನಿವೇಶನಗಳ ಸಂಖ್ಯೆ, ಅಳತೆ, ಬಡಾವಣೆಗಳ ಮತ್ತು ಹಾಲಿ ಯಾರ ಹೆಸರಿನಲ್ಲಿದೆ ಎಂಬ ಮಾಹಿತಿಯನ್ನು ಹೆಚ್ಚು ಪ್ರಚಾರ ಮಾಡಿಲ್ಲದಿರುವುದರಿಂದ ಮತ್ತು ಸದರಿ ಸ್ವತ್ತುಗಳಲ್ಲಿ ಮುಟ್ಟುಗೋಲು ಹಾಕಿಕೊಂಡಿರುವ ವಿವರಗಳ ಫಲಕವನ್ನು ಹಾಕಿಲ್ಲದಿರುವುದರಿಂದ, ಕೆಲವರು ಅಮಾಯಕರಿಗೆ ಸದರಿ ನಿವೇಶನಗಳನ್ನು ಮಾರಾಟ ಮಾಡುವ, ಸದರಿ ಸ್ವತ್ತುಗಳಲ್ಲಿ ಆಕ್ರಮವಾಗಿ ಕಟ್ಟಡಗಳನ್ನು ಕಟ್ಟುವ ಕೆಲಸಗಳನ್ನು ಮಾಡುತ್ತಿದ್ದಾರೆ.

ಆದ್ದರಿಂದ ನಿಮ್ಮ ಸಂಸ್ಥೆಯಿಂದ ಮುಟ್ಟುಗೋಲು ಹಾಕಿಕೊಂಡಿರುವ ಸ್ವತ್ತುಗಳಲ್ಲಿ ಮೊಟ್ಟುಗೋಲು ಹಾಕಿಕೊಂಡಿರುವ ವಿವರಗಳ ಫಲಕಗಳನ್ನು ಅಳವಡಿಸಬೇಕು. ಸಂಸ್ಥೆ ಮುಟ್ಟುಗೋಲು ಹಾಕಿಕೊಂಡಿರುವ ಸ್ವತ್ತುಗಳ ವಿವರಗಳನ್ನು ಮಾಧ್ಯಮಗಳ ಮೂಲಕ ಪ್ರಕಟಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಿದ ಆಯುಕ್ತರಿಗೆ ಕೂಡಲೇ ಸೂಕ್ತ ಸೂಚನೆ ನೀಡಲು ಮನವಿ ಮಾಡಿಕೊಳ್ಳುತ್ತೇನೆ" ಎಂದು ಇ.ಡಿಗೆ ಬರೆದ ಪತ್ರದಲ್ಲಿ ಸ್ನೇಹಮಯಿ ಕೃಷ್ಣ ಮನವಿ ಮಾಡಿದ್ದಾರೆ.

# ಸುಶೀಲ್ ಕಾಳೆ ಕೊಲೆ ಪ್ರಕರಣ: ಮತ್ತೆ ನಾಲ್ವರು ಆರೋಪಿತರ ಬಂಧನ

**ವಿಜಯಪುರ, ಜು. 17**–ಸುಶೀಲ್ ಕಾಳೆ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ನಾಲ್ವರು ಆರೋಪಿತರನ್ನು ಬಂಧಿಸಲಾಗಿದೆ.

ವಿಜಯಪುರದ ಭರತ್ ನಗರದ ಗೌತಮ ಹನಮಂತ ಆಲಮೇಕರ (25), ದೇಗಿನಾಳ ಗ್ರಾಮದ ನಾರಾಯಣ ಗಣಪತಿ ಜಾಧವ (20), ಕೊಲ್ಹಾರ ತಾಲೂಕಿನ ಹನುಮಾಪುರ ಗ್ರಾಮದ ಬಸವರಾಜ ಮುನ್ನಾಳ( 20) ಹಾಗೂ ಬಾಗಲಕೋಟೆ ನವನಗರದ ಪ್ರಜ್ವಲ ಶರಣಪ್ಪ ಹಳಿಮನಿ (ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ) ಬಂಧಿತ ಆರೋಪಿತರು.

ನಿನ್ನೆಯಷ್ಟೇ ಹಿಟ್ನಳ್ಳಿಯ ಹಾಲಿವಸ್ತಿ ಸಾಯಿ ಪಾರ್ಕ್ ನಿವಾಸಿ ವಿಠೋಬಾ ಕಲ್ಲವ್ವಗೋಳ (29), ಕೊಲ್ಹಾರ ತಾಲೂಕಿನ ನಾಗರದಿನ್ನಿ ಗ್ರಾಮದ ಸುದೀಪ ಅಲಿಯಾಸ ಸುಭಾಸ ರಮೇಶ ಬಗಲಿ (ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ) ಅವರನ್ನು ಬಂಧಿಸಲಾಗಿತ್ತು. ಕಾಳೆ ಕೊಲೆ ಪ್ರಕರಣದಲ್ಲಿ ಒಟ್ಟು ಆರು ಜನ ಆರೋಪಿತರನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿತರಿಂದ ಕೃತ್ಯಕ್ಕೆ ಬಳಸಲಾದ 1 ಕಂಟ್ರಿ ಪಿಸ್ತೂಲ್, 4 ಜೀವಂತ ಗುಂಡುಗಳು ಹಾಗೂ 3 ಮೋಟಾರ್ ಸೈಕಲ್‌ಗಳನ್ನು ಜಪ್ತಿ ಮಾಡಲಾಗಿದ್ದು, ಪ್ರಕರಣದ ತನಿಖೆ ಮುಂದುವರೆದಿದೆ.

# ವೈಭವದಿಂದ ಜರುಗಿದ ಚಾಮುಂಡೇಶ್ವರಿ ವರ್ಧಂತಿ ಉತ್ಸವ

**ಮೈಸೂರು,ಜು.17**– ಚಾಮುಂಡಿಬೆಟ್ಟ ದಲ್ಲಿ ನಾಡ ಅಧಿದೇವತೆ ಚಾಮುಂಡೇಶ್ವರಿ ತಾಯಿಯ ವರ್ಧಂತಿ ಉತ್ಸವ ಲಕ್ಷಾಂತರ ಭಕ್ತರ ಸಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು. ಮೈಸೂರು ರಾಜವಂಶಸ್ಥರ ಕುಲದೇವ ತೆಯೂ ಅದ ಚಾಮುಂಡೇಶ್ವರಿಯ ವರ್ಧಂತಿ ಉತ್ಸವದ ಹಿನ್ನೆಲೆಯಲ್ಲಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯಗಳು ನೆರವೇರಿದವು.

ದೇವಸ್ಥಾನದಲ್ಲಿ ಮುಂಜಾನೆ 4 ಗಂಟೆಯಿಂದ ಪೂಜಾ ಕೈಂಕರ್ಯಗಳು ಆರಂಭಗೊಂಡವು.ದೇವಿಯ ಮೂರ್ತಿಗೆ ಬೆಟ್ಟದಲ್ಲಿರುವ ದೇವಿ ಕೆರೆಯಿಂದ ತಂದ ಶುದ್ಧ ಜಲದಿಂದ ಅಭಿಷೇಕ ಮಾಡಿ ನಂತರ ತಾಯಿಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ ಬಳಿಕ ವಿವಿಧ ಹೂವುಗಳಿಂದ ಅಲಂಕಾರ ಮಾಡಿ ಕುಂಕುಮಾರ್ಚನೆ, ಸಹಸ್ರನಾಮಾರ್ಚನೆ ನೆರವೇರಿಸಲಾಯಿತು.

ನಂತರ ಮಹಾ ಮಂಗಳಾರತಿ ಬಳಿಕ ಉತ್ಸವ ಮೂರ್ತಿಯನ್ನು ಬೆಳ್ಳಿ ಪಲ್ಲಕ್ಕಿಯಲ್ಲಿ ಇರಿಸಿ, ದೇವಸ್ಥಾನದ ಆವರಣದಲ್ಲಿ ಪ್ರದಕ್ಷಿಣೆ ಹಾಕಲಾಯಿತು ಮತ್ತೆ ದೇವಸ್ಥಾನದ ಮುಂಭಾಗದಲ್ಲಿ ಚಿನ್ನದ ಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಮೆರವಣಿಗೆ ಮಾಡಲಾಯಿತು.

ಅರಮನೆ ಪೊಲೀಸ್ ಬ್ಯಾಂಡ್ ಜೊತೆಗೆ ಮಂಗಳವಾದ್ಯ, ಛತ್ರಿ, ಚಾಮರಗಳೊಂದಿಗೆ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

ವರ್ಧಂತಿ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ದೇವಿಯ ದರ್ಶನಕ್ಕೆ ಬರುವ ಲಕ್ಷಾಂತರ ಭಕ್ತರು, ಗಣ್ಯರಿಗೆ ಜಿಲ್ಲಾಡಳಿತ ಅಗತ್ಯ ಸೌಲಭ್ಯ ಕೈಗೊಂಡಿತ್ತು.ವರ್ಧಂತಿ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಹೆಚ್ಚು ಭಕ್ತರು ಆಗಮಿಸಿದ್ದರಿಂದ ಭದ್ರತೆಗಾಗಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿತ್ತು.

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹಾಗೂ ಸಂಸದ ಯದುವೀರ



ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ತ್ರಿಷಿಕಾ ಕುಮಾರಿ ಒಡೆಯರ್ ಅವರು ಚಾಮುಂಡಿ ಸನ್ನಿಧಿಯಲ್ಲಿ ದೇವಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಚಾಮುಂಡೇಶ್ವರಿ ದೇವಿಯ ವರ್ಧಂತಿ ಹಿನ್ನೆಲೆಯಲ್ಲಿ ಖಾಸಗಿ ವಾಹನಗಳಿಗೆ ಚಾಮುಂಡಿ ಬೆಟ್ಟಕ್ಕೆ ಪ್ರವೇಶವಿರಲಿಲ್ಲ.

ಮೈಸೂರಿನ ಲಲಿತ ಮಹಲ್ ಹೆಲಿಪ್ಯಾಡ್ ನಿಂದ ಭಕ್ತಾದಿಗಳಿಗಾಗಿ ಉಚಿತ ಬಸ್ ಸೇವೆಯನ್ನು ಕಲ್ಪಿಸಲಾಗಿತ್ತು.ಚಾಮುಂಡೇಶ್ವರಿ ದೇವಿಯ ವರ್ಧಂತಿ ಪ್ರಯುಕ್ತ ನಗರದ ಹಲವು ಭಾಗಗಳಲ್ಲಿ ಸಾರ್ವಜನಿಕವಾಗಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಹಮಿಕೊಂಡು ಪ್ರಸಾದ ವಿನಿಯೋಗ ಮಾಡಲಾಯಿತು.

# ರಸ್ತೆ ಅಪಘಾತ: 7 ಸಾವು

**ಮುಂಬೈ, ಜು.17**–ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿ ಕಾರು ಮತ್ತು ಬೈಕ್ ನಡುವೆ ಡಿಕ್ಕಿ ಸಂಭವಿಸಿ ಏಳು ಜನರು ಸ್ಥಳದಲ್ಲೇ ಮೃತಪಟ್ಟಿದ್ದು, ಮತ್ತಿಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ನಾಸಿಕ್ ಜಿಲ್ಲೆಯ ವಾಣಿ–ದಿಂಡೋರಿ ಹೆದ್ದಾರಿಯಲ್ಲಿ ಬುಧವಾರ ರಾತ್ರಿ 11.57 ಗಂಟೆಗೆ ಈ ಅಪಘಾತ ಸಂಭವಿಸಿದೆ.ಅಪಘಾತದ ಬಳಿಕ ಎರಡು ವಾಹನಗಳು ರಸ್ತೆಯ ಪಕ್ಕದಲ್ಲಿರುವ ಕಾಲುವೆಯಲ್ಲಿ ಬಿದ್ದಿರುವುದು ಕಂಡುಬಂದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಗಾಯಾಳುಗಳನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಘಟನಾ ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತದೆ ಎಂದೂ ಅವರು ಹೇಳಿದ್ದಾರೆ.

